**<u>ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಮುಧೋಳ</u>**

**<u>ಸಿ. ಸಿ.ನಂ.376/2024</u>**

**ಪಿರ್ಯಾದಿ ಃ -** **ಶ್ರೀ.ತುಕಾರಾಮ ತಂ.ಕರಿಯಪ್ಪ ಡಾಲಿ**

**ವಿರುದ್ದ**

**ಆರೋಪಿ ಃ -** **ಶ್ರೀ.ಬಸವರಾಜ ತಂ.ಯಲ್ಲಪ್ಪ ಕಗಲಗೊಂಬ**

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ.252 ರ ಅಡಿಯಲ್ಲಿ ಮಾಡಲಾದ ಆಪಾದನೆ</u>**

ಮೇಲೆ ಹೆಸರಿಸಲಾದ ಆರೋಪಿಯವರಾದ ನೀವು ಪ್ರಾಪಂಚಿಕ ಅಡಚಣೆ ಸಲುವಾಗಿ 2023 ನೇ ಸಾಲಿನ ಮಾರ್ಚ ತಿಂಗಳ ಮೊದಲನೇ ವಾರದಲ್ಲಿ ಪಿರ್ಯಾದಿಯವರಿಂದ ರೂ.2,50,000/- ಗಳನ್ನು ಸಾಲವಾಗಿ ಪಡೆದಿರುತ್ತೀರಿ. ಅದರ ತಿರುವಳಿಗಾಗಿ ರೂ.2,50,000/- ಗಳ ಚೆಕ್ ಸಂಖ್ಯೆ 007233 ದಿಃ01.03.2024 ರಂದು ಕರ್ನಾಟಕ ವಿಕಾಸ್ ಗ್ರಾಮೀಣ ಬ್ಯಾಂಕ ಶಾಖೆ ಃ ಭಂಟನೂರ ಮೇಲೆ ತೆಗೆದು ಅದನ್ನು ಪಿರ್ಯಾದಿಯವರಿಗೆ ನೀಡಿರುತ್ತೀರಿ. ಪಿರ್ಯಾದಿಯವರು ಅವರು ಖಾತೆಯನ್ನು ಹೊಂದಿರುವ ಕೆನರಾ ಬ್ಯಾಂಕ ಶಾಖೆಃ ಮುಧೋಳ ಇವರಲ್ಲಿ ನಗದೀಕರಣಕ್ಕಾಗಿ ನೀವು ನೀಡಿದ ಚೆಕ್ಕನ್ನು ಸಲ್ಲಿಸಿದ್ದು, "**Drawers Signature Differs**" ಎಂದು ನೀವು ನೀಡಿದ ಚೆಕ್ಕು ನಗದೀಕರಣವಾಗದೇ ದಿ:02.03.2024 ರಂದು ಹಿಂದಿರುಗಿರುತ್ತದೆ. ನಂತರ ಪಿರ್ಯಾದಿಯವರು ನಿಮಗೆ ದಿಃ21.03.2024 ರಂದು ಅಗತ್ಯ ತಿಳುವಳಿಕೆ ನೋಟಿಸನ್ನು ನೀಡಿದ್ದು, ಸದರಿ ನೋಟಿಸ್ ದಿಃ26.03.2024 ರಂದು ಜಾರಿಯಾಗಿದ್ದರು, ಯುಕ್ತ ಕಾಲಾವಕಾಶವನ್ನು ನೀಡಿದ ನಂತರವೂ ನೀವು ಹಣವನ್ನು ಹಿಂದಿರುಗಿಸದೇ ಇರುವ ಮೂಲಕ ಎನ್.ಐ ಆ್ಯಕ್ಟನ ಕಲಂ.138 ರ ಅಡಿಯಲ್ಲಿ ಅಪರಾಧವನ್ನು ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇರುತ್ತದೆ.

ಪ್ರ.1) ನಿಮ್ಮ ಮೇಲೆ ಮಾಡಲಾದ ಆಪಾದನೆಯನ್ನು ತಿಳಿದುಕೊಂಡಿದ್ದೀರಾ?

ಉಃ- ತಿಳಿದುಕೊಂಡಿದ್ದೇನೆ.

ಪ್ರ.2) ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಗೆ ಒಳಪಡುತ್ತೀರಾ?

ಉಃ- ಇಲ್ಲ, ವಿಚಾರಣೆಯಾಬೇಕು.

(ಆರೋಪಿಯವರಿಗೆ ಆಪಾದನೆಯನ್ನು ಅವರಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ತಿಳಿಸಲಾಯಿತು ಎಂದು ಈ ಮೂಲಕ ದೃಢೀಕರಿಸುತ್ತೇನೆ)

ಸ್ಥಳ ಃ ಮುಧೋಳ
ದಿನಾಂಕ ಃ 22.07.2024.

ಸಹಿ/-
ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ ಮುಧೋಳ